**ಇಂದು ದಿನಾಂಕಃ 21-03-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ B.S. ವಕೀಲರಿಂದಃ-**

ನನ್ನ ತಂದೆ ಹಲಚೇರಾ ಗ್ರಾಮದವರು. ನನ್ನ ತಂದೆಗೆ ಇಬ್ಬರು ಸಹೋದರರು ಅವರ ಹೆಸರು ಶಾಮರಾವ ಮತ್ತು ವೈಜನಾಥ. ಈಗ ನನ್ನ ತಂದೆ ಮತ್ತು ಶಾಮರಾವ ರವರು ಮೃತಪಟ್ಟಿರುತ್ತಾರೆ. ನನ್ನ ಅಜ್ಜನ ಹೆಸರು ರೇವಪ್ಪ. ನನ್ನ ಅಜ್ಜ ರೇವಪ್ಪ ರವರಿಗೆ ಹಲಚೇರಾದಲ್ಲಿ ಹೊಲ ಮತ್ತು ಮನೆ ಮತ್ತು ಕೋಟಗಿ ಗ್ರಾವುದಲ್ಲಿ ಮನೆ ಮತ್ತು ಹೊಲ ಇತ್ತು. ಕೊಟಗಿ ಗ್ರಾಮದಲ್ಲಿರುವ ಹೊಲ ಮತ್ತು ಮನೆ ನನ್ನ ಅಜ್ಜಿಯ ತವರು ಮನೆ ಆಸ್ತಿ. ನನ್ನ ತಂದೆ ಪಾಲುಗಾರಿಕೆ ಮಾಡಿದಾಗ ಯಾರಿಗೆ ಯಾವ ಗ್ರಾಮದಲ್ಲಿ ಎಷ್ಟು ವಿಸ್ತೀರ್ಣದ ಹೊಲ ಮನೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟಾ ನನಗೆ 22 ವರ್ಷ ವಯಸ್ಸಾಗಿತ್ತು. ನನ್ನ ತಂದೆಯ ಜೀವಂತಕಾಲದಲ್ಲಿ ಶಾಮರಾವ ರವರು ಯಾುವ ಕಾರಣಕ್ಕಾಗಿ ಕೊಟಗಾ ಗ್ರಾಮದಲ್ಲಿದ್ದಾರೆ ಮತ್ತು ನಾವು ಯಾಕೆ ಹಲಚೇರಾ ಗ್ರಾಮದಲ್ಲಿ ಇದ್ದೇವೆ ಎಂದು ನಾನು ನನ್ನ ತಂದೆಗೆ ಕೇಳಿಲ್ಲ. ನನ್ನ ತಂದೆಯ ಜೀವಂತಕಾಲದಲ್ಲಿ ನಾನು ಕೊಟಗಾ ಗ್ರಾಮಕ್ಕೆ ಹೋಗಿದೆ. ಶಾಮರಾವ ರವರು ಸಹ ನಮ್ಮ ಮನೆಗೆ ಹೋಗಿ ಬರುವುದು ಮಾಡುತ್ತಿದ್ದರು.

ನನ್ನ ತಂದೆಗೆ ಹಲಚೇರಾ ಗ್ರಾಮದಲ್ಲಿ 12 ಎಕರೆ ಜವೀನು ಮತ್ತು 3 ಕೋಣೆಗಳ ಮನೆ ಇತ್ತು. ಸದರಿ ಆಸ್ತಿಯಲ್ಲಿ ಈಗ 4 ಎಕರೆ ಜವೀನು ಮತ್ತು ಎರಡು ಕೋಣೆಗಳು ಮಾತ್ರಾ ಇವೆ. ಸದರಿ 12 ಎಕರೆ ಜಮೀನಿನಲ್ಲಿ 8 ಎಕರೆ ಜಮೀನು ನನ್ನ ಅಜ್ಜ ಮಾರಾಟ ಮಾಡಿರುತ್ತಾರೆ. ವೈಜನಾಧ ಮತು ಶಂಕ್ರಪ್ಪ ರವರಿಗೆ 12 ಎಕರೆ ಜವೀನು ಮತ್ತು 3 ಕೋಣೆಗಳ ಮನೆ ಇತ್ತು. ವೈಜನಾಥ ಮತ್ತು ಶಂಕ್ರಪ್ಪ 8 ಎಕರೆ ಜಮೀನನ್ನು ಒಟ್ಟಿಗೆ ಮಾರಾಟ ಮಾಡಿದ್ದಾರಯೇ ಅಧವಾ ಪಾಲುಗಾರಿಕೆ ಮಾಡಿದ ನಂತರ ಮಾರಾಟ ಮಾಡಿದಾರೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜವೀನನ್ನು ಜಂಟಿಯಾಗಿ ಮಾರಾಟ ಮಾಡಿದ್ದಾರಯೇ ಅಥವಾ ಪ್ರತ್ಯೇಕವಾಗಿ ಮಾರಾಟ ಮಾಡಿದ್ದಾರಯೇ ಎಂದು ನಾನು ಅದರ ಮಾರಾಟ ಪತ್ರವನ್ನು ನೋಡಿಲ್ಲ.

ನನ್ನ ತಂದೆಯ ಸಹೋದರನಾದ ವೈಜನಾಥ ರವರು ಜೀವಂತ ಇದ್ದಾರೆ ಎಂದರೆ ಸರಿ. ನನ್ನ ತಂದೆ ವಿಧ್ಯಾಭ್ಯಾಸ ಮಾಡಿದ್ದರು ಮತ್ತು ಸಹಿಯನ್ನು ಸಹ ಮಾಡುತ್ತಿದ್ದರು. ವೈಜನಾಥ ರವರು ಸಹ ಸಹಿ ಮಾಡುತ್ತಿದ್ದರು. ನನ್ನ ಅಜ್ಜನಾದ ರೇವಪ್ಪ ರವರು ಸಹಿ ಮಾಡುತ್ತಿದ್ದಾರೆ ಅಥವಾ ಹೆಬ್ಬೆರಳಿನ ಗುರುತನ್ನು ಹಾಕುತ್ತಿದ್ದರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಸಹೋದರನಾದ ಶಾಮರಾವ ರವರು ಸಹ ಸಹಿ ಮಾಡುತ್ತಿದ್ದರು.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯ ಚಿಂಚೋಳಿಯಲಿ ದಾವೆ ಸಂಖ್ಯೆಃ 1/2021 ಚಾಲ್ತಿಯಲ್ಲಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿದೇನೆ ಎಂದರೆ ಸರಿ. ಸದರಿ ದಾವೆ ಮಾಲೀಕತ್ವ ಘೋಷಣೆಗಾಗಿ ಮತ್ತು ಶಾಶ್ವತ

ತಡೆಯಾಜ್ಞೆಗಾಗಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 22-01-2021 ರಂದು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಪ್ರತಿವಾದಿಯರು ನನ್ನ ವಿರುದ್ದ ದಾವೆ ಸಲ್ಲಿಸಿದಾರೆ ಎಂದರೆ ಸರಿ. ನನಗೆ ಜಮೀನು ಮಾರಾಟ ಮಾಡಿದ ಪ್ರಾಸಾ 3 ರವರು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನನಗಿಂತ ಮೊದಲು ಹಾಜರಾಗಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಾಸಾ 3 ರವರಿಗೆ ಅಸಲು ದಾವೆ ಸಂಖ್ಯೇ 1/2021 ರ ಬಗ್ಗೆ ಗೊತ್ತಿತ್ತು ಎಂದರೆ ಸಾಕ್ಷಿ ಅವರಿಗೆ ಗೊತ್ತಿತ್ತು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ದಾವಾ ಸ್ವತ್ತಿನ ಮಾಲೀಕರು ಇದ್ದಾರೆ ಎಂದು ನನ್ನ ವಿರುದ್ದ, ನನ್ನ ತಮ್ಮಹಾಗೂ ನನ್ನ ತಾಯಿಯ ವಿರುದ್ದ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ತಮ್ಮ ದಾವೆಯ ಬಗ್ಗೆ ನನಗೆ ಹೇಳಿದ್ದರು ಎಂದರೆ ಸಾಕ್ಷಿ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ತವರು ಮನೆಗೆ ಹೋಗಿ ಬರುವುದು ಮಾಡುತ್ತೇನೆ ಎಂದರೆ ಸರಿ. 2021 ರಲ್ಲಿಯೇ ಪ್ರತಿವಾದಿಯರು ನನ್ನ ವಿರುದ್ದ ಪ್ರಾ ಸಾ 3, ನನ್ನ ತಮ್ಮ ಹಾಗೂ ನನ್ನ ತಾಯಿ ವಿರುದ್ದ ದಾವೆ ಸಲ್ಲಿಸಿರುವ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಈ ದಾವೆ ನಾನು ಸಲ್ಲಿಸುವ ಮೊದಲೇ ಅಸಲು ದಾವೆ ಸಂಖೆಃ 1/2021 ರಲ್ಲಿ ನನಗೆ ನೋಟಿಸು ಬಂದಿತ್ತು ಎಂದರೆ ಸರಿ. ಪ್ರತಿವಾದಿಯರು ದಾವೆ ಸಲ್ಲಿಸಿದ ಕಾರಣ ನಾನು ಈ ದಾವೇ ಸಲ್ಲಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಯರು ನಮಗೆ ಗೊತ್ತಿಲ್ಲದೇ ದಾವಾ ಆಸ್ತಿಯಲ್ಲಿ ರಾಶಿ ಮಾಡುತ್ತಿದ್ದ ಕಾರಣ ದಾವೆಯನ್ನು ಹೂಡಿದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯರೇ ದಾವಾ ಆಸ್ತಿಯಲ್ಲಿ ಬಿತ್ತನೆ ಮಾಡಿದ ಕಾರಣ ಅವರು ರಾಶಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾವು ಬಿತ್ತನೆ ಮಾಡಿದ್ದೇವೆ ಎಂದು ನುಡಿಯುತ್ತಾರೆ.

ನನಗೆ ಹಾಗೂ ದಾವಾ ಆಸ್ತಿಗೆ ಸಂಬಂಧ ಇಲ್ಲದೇ ಇರುವ ಕಾರಣ ಅಸಲು ದಾವೆ ಸಂಖೆಃ 1/2021 ರಲಿ 1ನೇ ಪ್ರತಿವಾದಿ ಮಾಡಿದ ಸಾಕ್ಷಿಗೆ ನಾನು ಪಾಟೀಸವಾಲು ಮಾಡಿಲ್ಲ ಎಂದರೆ ಸಾಕ್ಷಿ ಆ ದಾವೆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ದಾವಾ ಅಸ್ತಿಯ ಮಾಲೀಕರು ಮತುತ ಕಬ್ಜೆದಾರರು ಇದ್ದ ಕಾರಣ ಸದರಿ ದಾವೆಯಲ್ಲಿ ಅವರಿಗೆ ಪಾಟೀಸವಾಲು ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಯಾಕೆ ಬೇಕು ಎಂದು ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲೀ 1ನೇ ಪ್ರತಿವಾದಿ ದಾವಾ ಆಸ್ತಿಯ ಮಾಲೀಕರು ಮತ್ತು ಕಬ್ಜೆದಾರು ಇದ್ದಾರೆ ಎಂದು ಮತ್ತು ನನ್ನ ಕ್ರಯ ಪತ್ರ ರದ್ದುಗೊಳಿಸಬೇಕು ಎಂದು ಸಲ್ಲಿಸಿದ್ದ ದಾವೆ ಸರಿ ಇದ್ದ ಕಾರಣ 1ನೇ ಪ್ರತಿವಾದಿಗೆ ನಾನು ಪಾಟೀಸವಾಲು ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನದಾವೆಯಲ್ಲಿ ದಾವಾ ಆಸ್ತಿಯಲ್ಲಿ ನಾಲ್ಕು ಕಡೆ ಜಮೀನುಗಳ ಮಾಲೀಕರ ಹೆಸರು (ಚೆಕ್ಕುಬಂದಿ) ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಾದಪತ್ರವನ್ನು ತೋರಿಸಿ ದಾವಾ ಆಸ್ತಿಯ ಚೆಕ್ಕುಬಂದಿ ಮಾಲಿಕರ ಹೆಸರು ಉಲ್ಲೇವಿಲ್ಲ ಎಂದು ಸೂಚಿಸಿದಾಗ ಸಾಕ್ಷಿ ಉಲ್ಲೇಖವಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಾನು ಕಬ್ಜೆಯಲ್ಲಿರದ ಕಾರಣ ದಾವೆಯಲ್ಲಿ ಚೆಕ್ಕುಬಂದಿ ಮಾಲಿಕರ ಹೆಸರು ಬರೆಸಿಲ್ಲ ಎಂದರೆ

ಸಾಕ್ಷಿ ಮಾಲೀಕರ ಹೆಸರು ನನಗೆ ಗೊತ್ತಿದೆ ಆದರೆ ಉತ್ತರ ದಕ್ಷಿಣ ಪೂರ್ವ ಪಶ್ಚಿಮ ನನಗೆ ಗೊತ್ತಾಗುವುದಿಲ್ಲ ಆದ್ದರಿಂದ ನಾನು ಬರೆಸಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ದಕ್ಷಿಣಕ್ಕೆ ಗೌರಮ್ಮ ರವರ ಜಮೀನು, ಪಶ್ಚಿಮಕ್ಕೆ ಶಾಮರಾಯ ರವರು ಜಮೀನು, ಉತ್ತರಕ್ಕೆ ಶಾಮರಾಯ ರವರ ಜಮೀನು, ಪೂರ್ವಕೆ ವೈಜನಾಥ ರವರ ಜಮೀನು ಇದೆ. ನಾನು ಕಬ್ಜೆಯಲ್ಲಿರದ ಕಾರಣ ನಾನು ಹೇಳಿದ ಚೆಕ್ಕುಬಂದಿ ತಪ್ಪು ಇದೆ ಎಂದರೆ ಸಾಕ್ಷಿ ನನಗೆ ದಿಕ್ಕು ಗೊತ್ತಾಗದೇ ಇರುವ ಕಾರಣ ತಪ್ಪು ಹೇಳಿದೇನೆ ಎಂದು ನುಡಿಯುತ್ತಾರೆ. ನನ್ನ ವಾದಪತ್ರದಲ್ಲಿ ದಿಕ್ಕುಗಳನ್ನು ತಿಳಿದುಕೊಂಡಿಯೇ ದಾವಾಆಸ್ತಿಯ ಚೆಕ್ಕುಬಂದಿಯನ್ನು ಉಲ್ಲೇಖಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ವಾದಪತ್ರದಲ್ಲಿ ದಾವಾ ಆಸ್ತಿಯ ಪೂರ್ವಕ್ಕೆ ಗೌರಮ್ಮ ರವರ ಜಮೀನು ಇದೆ ಎಂದು ಬರಸಿದ್ದೇನೆ ಎಂದು ನುಡಿಯುತ್ತಾರೆ. ನಾನು ದಾವಾ ಜಮೀನಿನ ಕಬ್ಜೆ ಇಲ್ಲದಿರುವ ಕಾರಣ ನನ್ನ ವಾದಪತ್ರದ ವಿರುದ್ದವಾಗಿ ಗೌರಮ್ಮ ರವರ ಜಮೀನು ಪೂರ್ವಕೆ ಇದೆ ಎಂದು ಹೇಳುತಿದ್ದೇನೆ ಎಂದರೆ ಸಾಕ್ಷಿ ನನಗೆ ದಿಕ್ಕು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ಈಗ 3 ವರ್ಷಗಳಿಂದ ನಾವು ಮತ್ತು ನನ್ನ ತಂದೆಯ ಸಹೋದರರು ಮತ್ತು ಅವರ ಮಕ್ಕಳ ಮಾತನಾಡುತ್ತಿಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡುವ ಮೊದಲು ಪ್ರತಿವಾದಿಯರಿಗೆ ನಾನು ಕೇಳಿಲ್ಲ. ದಾವಾ ಆಸ್ತಿ ಖರೀದಿ ಮಾಡುವ ಮೊದಲು ನನ್ನ ತಾಯಿಗೆ ನಾನು ಕೇಳಿದ್ದೇನೆ. ನಿಮ್ಮ ತಾಯಿ ಏನು ಹೇಳಿದರು ಎಂದು ಪ್ರಶ್ನಿಸಿದಾಗ ಸಾಕ್ಷಿ ಪ್ರಾಸಾ 3 ರವರ ಆಸ್ತಿಯಲ್ಲಿ ನನಗೆ ಹಕ್ಕಿಲ್ಲ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನೀವು ನಿಮ್ಮ ತಾಯಿ ಕೇಳಿದಾಗ ದಾವಾ ಆಸ್ತಿಯ ಮೇಲೆ ದಾವೆ ಚಾಲಿಯಲ್ಲಿದೆ ಎಂದುಹೇಳಿದ್ದರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಹೇಳೇ ಇಲ್ಲ ಎಂದು ನುಡಿಯುತ್ತಾರೆ. ದಾವಾಆಸ್ತಿಯ ಮೇಲೆ ದಾವೆ ಇರುವ ಬಗ್ಗೆ ನಾನು ನನ್ನ ತಾಯಿಗೆ ವಿಚಾರಿಸಿಲ್ಲ. ಪ್ರಾಸಾ 3 ರವರು ಹಲಚೇರಾದಲ್ಲಿರುವ ಹಿರಿಯರ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಮತ್ತು ಅವರ ಸಹೋದರರು 1981 ರಲ್ಲಿ ಪಾಲುಗಾರಿಕೆ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪಾಲುಗಾರಿಕೆಯಲ್ಲಿ ಕೊಟಗಾ ಗ್ರಾಮದಲಿರುವ ಆಸ್ತಿ ಶಾಮರಾವ ರವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಲಚೇರಾ ಗ್ರಾಮದಲ್ಲಿ ಶಾಮರಾವ ರವರಿಗೆ ಯಾವುದೇ ಹೊಲ ಮನೆ ಬಂದಿಲ್ಲ ಎಂದರೆ ಸರಿ. ನಾನು ಚಿಕ್ಕವಳಿದ್ದಾಗಿನಿಂದಲೂ ಶಾಮರಾವ ರವರಿಗೆ ಹಲಚೇರಾ ಗ್ರಾಮದಲ್ಲಿ ಯಾವುದೇ ಹೊಲ ಮನೆ ಬಂದಿಲ್ಲ ಎಂದು ನನಗೆ ಗೊತ್ತಿತ್ತು ಎಂದರೆ ಸರಿ.

ನನ್ನ ವಾದಪತ್ರದಲ್ಲಿ ಪ್ರತಿವಾದಿಯರು ನನಗೆ ಸಂಬಂಧ ಇಲ್ಲ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸಾಕ್ಷಿ ಸಂಬಂಧ ಇದೆ ಎಂದು ಬರಸಿದ್ದೇನೆ ಎಂದು ನುಡಿಯುತ್ತಾರೆ. ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವಾ

ಚಾಲ್ತಿಯಲ್ಲಿದ್ದರೂ ಸಹ ನಾಮ ಮಾತ್ರಕ್ಕಾಗಿ ದಾವಾ ಆಸ್ತಿಯನ್ನು ನನ್ನ ಹಸರಿಗೆ ಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿ ನಾನು ಹಣ ನೀಡಿ ಮಾಡಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಪ್ರಾಸಾ 3 ರವರು ಇದೇ ನ್ಯಾಯಾಲಯದಲ್ಲಿ ಪ್ರತಿವಾದಿಯರ ವಿರುದ್ದ ದಾವೆ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಈಗಾಗಲೇ ಮಾಲೀಕತ್ವ ಘೋಷಣೆಗಾಗಿ ಮತ್ತು ಶಾಶ್ವತ ತಡೆಯಾಜ್ಞೆಗಾಗಿ ದಾವೆ ಚಾಲ್ತಿಯಲ್ಲಿದರೂ ಸಹ ಈ ನ್ಯಾಯಾಲಯಲ್ಲಿ ಶಾಶ್ವತ ತಡೆಯಿಾಜ್ಞೆಗಾಗಿ ಯಾವುದೇ ಅಂಶವಿಲ್ಲದೇ ಇದ್ದರೂ ಸಹ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ರ ದಾಖಲೆಯನ್ನು ಬರೆಯುವ ಸಮಯಕ್ಕೆ ಪ್ರಾಸಾ 3 ರವರ ದಾವಾ ಆಸ್ತಿಯ ಮಾಲೀಕರು ಇರಲಿಲ್ಲ ಎಂದರೆ ಸರಿಯಲ್ಲ.

ನಾಮ ಮಾತ್ರಕ್ಕಾಗಿ ಪ್ರಾಸಾ 3 ರವರ ಹೆಸರು ಕಂದಾಯ ದಾಖಲೆಗಳಲಿದ್ದ ಕಾರಣ ಮತು ಪ್ರತಿವಾದಿಯರ ಹಕ್ಕನ್ನು ಮುಳುಗಿಸಲು ಸುಳ್ಳು ದಾಖಲೆಗಳನು ಸೃಷ್ಟಿಸಿ ಸುಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಆಸ್ತಿಯಲ್ಲಿ ಕಬ್ಜೆಯಲ್ಲಿ ಇರದ ಕಾರಣ ಕೊಟಗಿ ಗ್ರಾಮಸ್ಥರನು ಸಾಕ್ಷಿದಾರನ್ನಾಗಿ ಮಾಡದೇ ಪ್ರಾಸಾ 3 ರವರ ಚೆನ್ನಾಗಿ ಸುಳ್ಳು ಹೇಳುತ್ತಾರೆ ಎಂದು ತಿಳಿದು ಅವರ ಸಾಕ್ಷಿ ಮಾಡಿಸಿದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರಾಸಾ 3 ರವರ ಮದ್ಯ ಯಾವುದೇ ವ್ಯವಹಾರ ಆಗದೇ ಇದ್ದರೂ ಸಹ ನಾಮ ಮಾತ್ರಕ್ಕಾಗಿ ಮಾರಾಟ ಪತ್ರವನ್ನು ಬರೆಸಿದೇನೆ ಎಂದರೆ ಸರಿಯಲ್ಲ.

ಈಗಲೂ ಸಹ ನಾನು ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿ ಇಲ್ಲದೇ ಇದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳು ದಾವೆ ಹೂಡಿ ಈ ದಿನ ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**